# ಉಡುಪಿಯ ಕನ್ನಡದ ಪೇಚಿನ ಪ್ರಸಂಗಗಳು

ಬೀಗ ಹಾಕಿ ಹೊರಗೆ ಅಂಗಳಕ್ಕೆ ಬಂದಾಗ ಪಕ್ಕದ ಮನೆಯವರು ನನ್ನಾಕೆಯ ಹತ್ರ, 'ಈಗ ಹೊರಟ್ರೆ ರಾತ್ರಿ ಹೋಗಿ ಮುಟ್ತೀರಾ'? ಅಂತ ಕೇಳಿದ್ರು. ನನ್ನವಳ ಮುಖ ಕೆಂಪು ಕೆಂಪಾಯಿತು.

■ **ಪಿ.ಬಿ. ಪ್ರಸನ್ನ**

ಕಲೆ: ಸಂತೋಷ್ ಸಸಿಹಿತ್ಲು

ಅದು ನಮ್ಮ ಮದುವೆಯಾದ ಸುರು. ಸುಮಾರು ಇಪ್ಪತ್ತೆಂಟು ವರ್ಷಗಳ ಹಿಂದಿನ ಕತೆ. ನನ್ನ ಹೆಣ್ತಿ ಶಿರಸಿಯ ಹುಡುಗಿ. ಮದುವೆಯಾಗಿ ಬಂದದ್ದು ಉಡುಪಿಯ ಕಡೆಗೆ. ನಾನು ಬೆಳಿಗ್ಗೆ ಬೇಗ ಆಫೀಸಿಗೆ ಹೋಗ್ತಿದ್ದೆ. ನನ್ನ ಹೆಂಡತಿ ಮನೆಯ ಕೆಲಸ ಮುಗಿದ ಕೂಡ್ಲೆ ನೆರೆಮನೆಯವರೊಂದಿಗೆ ಹರಟುತ್ತಿದ್ದಳು. 'ತಿಂಡಿ ಆಯ್ತಾ? ಮಧ್ಯಾಹ್ನಕ್ಕೆ ಏನು ಅಡುಗೆ'? ಎಂದೆಲ್ಲ ಅಕ್ಕಪಕ್ಕದವರೊಂದಿಗೆ ವಿಚಾರಿಸಿಕೊಳ್ಳುತ್ತಿದ್ದದ್ದು ಮಾಮೂಲಿ ಆಗಿತ್ತು. ಅವರು 'ನಮ್ಮ ಮನೆಯಲ್ಲಿ ಗಂಜಿ. ನಿಮ್ಮ ಮನೆಯಲ್ಲಿ ಎಂತ?' ಅಂತ ಕೇಳ್ತಿದ್ರು. ಇವಳು 'ನಮ್ಮ ಮನೆಯಲ್ಲಿ ತೆಳ್ಳವು' ಅಂತ ಹೇಳ್ತಿದ್ಲು.

